ಆ) 1998-99ನೇ ಸಾಲಿನಲ್ಲಿ ಎಷ್ಟು ಕುಟುಂಬಗಳಿಗೆ ಹಸಿರು ಕಾರ್ಡ್‌ಗಳನ್ನು ವಿತರಣೆ ಮಾಡಲಾಗಿದೆ, ಇನ್ನೂ ಎಷ್ಟು ಹಸಿರು ಕಾರ್ಡ್‌ಗಳನ್ನು ವಿತರಣೆ ಮಾಡಬೇಕಾಗಿದೆ?

ಇ) ಗ್ರಾಮಾಂತರ ಪ್ರದೇಶಗಳಲ್ಲಿ ಒಂದೊಂದು ಕುಟುಂಬದಲ್ಲಿ ಸುಮಾರು 15 ರಿಂದ 20 ಜನರದ್ದು ಇಂತಹವರನ್ನು ಗುರುತಿಸಿ ಜನಸಂಖ್ಯೆಯ ಆಧಾರದ ಮೇಲೆ ಹಸಿರು ಕಾರ್ಡ್‌ಗಳನ್ನು ವಿತರಣೆ ಮಾಡುವ ಬಗ್ಗೆ ಕಾರ್ಯಕ್ರಮವನ್ನು ರೂಪಿಸಲಾಗಿದೆಯೇ?

ಶ್ರೀ ಬಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :—

ಅ) ಮೇಲಿಂದ ಮೇಲೆ ಹಸಿರು ಕಾರ್ಡ್‌ಗಳನ್ನು ಹೊಂದಲು ಅರ್ಹರಿರುವರನ್ನು ಗುರುತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇತ್ತೀಚೆಗೆ ದಿನಾಂಕ: 31-08-98ರ ಒಳಗಾಗಿ ಅರ್ಜಿಗಳನ್ನು ಸಲ್ಲಿಸಲು ತಿಳಿಸಲಾಗಿತ್ತು. ಅದರಂತೆ ಸಲ್ಲಿಸಿದ್ದ ಅರ್ಜಿಗಳನ್ನು ಪರಿಶೀಲಿಸಲಾಗಿ ಅರ್ಹರೆಂದು ಕಂಡುಬಂದ ಕುಟುಂಬಗಳಿಗೆ ಹಸಿರು ಪಡಿತರ ಚೀಟಿಗಳನ್ನು ವಿತರಿಸಲಾಗುತ್ತಿದೆ.

ಆ) ಇತ್ತೀಚೆಗೆ ಕರೆಯಲಾಗಿದ್ದ ಅರ್ಜಿಗಳ ಪೈಕಿ 6,55,009 ಕುಟುಂಬಗಳು ಹಸಿರು ಪಡಿತರ ಚೀಟಿಗಳನ್ನು ಪಡೆಯಲು ಅರ್ಹವೆಂದು ಗುರುತಿಸಿದ್ದು, ಇದರಲ್ಲಿ 5,49,103 ಹಸಿರು ಪಡಿತರ ಚೀಟಿಗಳನ್ನು ಈಗಾಗಲೇ ವಿತರಿಸಲಾದೆ. ಇನ್ನೂ 1,05,906 ಕುಟುಂಬಗಳಿಗೆ ಹಸಿರು ಪಡಿತರ ಚೀಟಿಗಳನ್ನು ವಿತರಿಸಬೇಕಾಗಿದೆ. ಈ ವಿತರಣೆ ಕೆಲಸವನ್ನು 31-3-99 ರೊಳಗೆ ಪೂರ್ಣಗೊಳಿಸಲಾಗುವುದು.

ಇ) ಕುಟುಂಬದಲ್ಲಿ ಎಷ್ಟು ಜನರಿದ್ದಾರೆಂಬುದರ ಆದಾರದ ಮೇಲೆ ಆಹಾರ ಧಾನ್ಯಗಳನ್ನು ವಿತರಣೆ ಮಾಡಲಾಗುತ್ತಿಲ್ಲಾ. ಪ್ರತಿ ಹಸಿರು ಕಾರ್ಡ್‌ಗೆ ಕಡಿಮೆ ದರದಲ್ಲಿ 10 ಕೆಜಿಯಂತೆ ಆಹಾರ ಧಾನ್ಯಗಳನ್ನು ವಿತರಿಸಲಾಗುತ್ತಿದೆ.

ಸರ್ಕಾರಿ ಮಹಿಳಾ ನೌಕರರು ಮೃತಪಟ್ಟರೆ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ.

11(312) ಶ್ರೀ ರಾಜಶೇಖರ ವೀರಣ್ಣ ಶೀಲವಂತ (ಗುಳೇದಗುಡ್ಡ) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಸರ್ಕಾರಿ ಮಹಿಳಾ ನೌಕರರು ಸೇವೆಯಲ್ಲಿದ್ದಾಗ ಮೃತಪಟ್ಟರೆ ಅವರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿರುವ ಅರ್ಜಿಗಳ ಸಂಖ್ಯೆ ಎಷ್ಟು ;

ಅ) ಅರ್ಜಿ ಸಲ್ಲಿಸಿದ ಅವಲಂಬಿತರಿಗೆ ಇಲ್ಲಿಯವರೆಗೆ ಉದ್ಯೋಗ ಒದಗಿಸದೇ ಇರಲು ಕಾರಣಗಳೇನು;

ಇ) ಉದ್ಯೋಗ ನಿರೀಕ್ಷೆಯಲ್ಲಿರುವ ಅವಲಂಬಿತರಿಗೆ ಎಂದಿನಿಂದ ಉದ್ಯೋಗ ಒದಗಿಸಲಾಗುವುದು?

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :—

ಅ) ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವ ಅಧಿಕಾರವನ್ನು ಸಂಬಂಧಿಸಿದ ನೇಮಕಾತಿ ಪ್ರಾಧಿಕಾರಗಳಿಗೆ ನೀಡಲಾಗಿರುವುದರಿಂದ ಈ ಮಾಹಿತಿ ಕೇಂದ್ರೀಕೃತವಾಗಿ ಕೂಡಲೇ ಲಭ್ಯವಿರುವುದಿಲ್ಲ.

ಆ) ಸೇವೆಯಲ್ಲಿದ್ದಾಗ ಮೃತರಾದ ಮಹಿಳಾ ಸರ್ಕಾರಿ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ನೇಮಕಾತಿ ನೀಡಲು ಆಸ್ಪವನ್ನು ಕಲ್ಪಿಸಲು ಜಾರಿಯಲ್ಲಿರುವ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡಲು ಈಗಾಗಲೇ ಕ್ರಮಕ್ಕೆಗೊಳ್ಳಲಾಗಿದೆ ಹಾಗೂ ಸದ್ಯದಲ್ಲಿಯೇ ಇದನ್ನು ಅಂತಿಮಗೊಳಿಸಲಾಗುವುದು.

ಇ) ಸದರಿ ಆಸ್ಪದವನ್ನು ಕಲ್ಪಿಸಿದ ಕೂಡಲೆ.

ಗುಳೇದಗುಡ್ಡ ಮತಕ್ಷೇತ್ರದಲ್ಲಿ ಕಾಡಾ ಯೋಜನೆಯಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳು.

12(313) ಶ್ರೀ ರಾಜಶೇಖರ ವೀರಣ್ಣ ಶೀಲವಂತ (ಗುಳೇದಗುಡ್ಡ) :— ಮಾನ್ಯ ಕಾಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಳೇದಗುಡ್ಡ ಮತಕ್ಷೇತ್ರದ ಬಾದಾಮಿ, ಹುನಗುಂದ, ಬಾಗಲಕೋಟೆ ತಾಲ್ಲೂಕಿನ ಗ್ರಾಮಗಳಲ್ಲಿ ಕಾಡಾ (ಯುಕೆಪಿ) ಹಾಗೂ ಕಾಡ (ಮಲಪ್ರಭಾ ಮತ್ತು ಘಟಪ್ರಭಾ) ಯೋಜನೆಗಳ ಅಡಿಯಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆಯೇ?

ಆ) ಹಾಗಿದ್ದರೆ ಯಾವ ಯಾವ ಗ್ರಾಮಗಳಲ್ಲಿ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ (ಸಂಪೂರ್ಣ ಆರ್ಥಿಕ ಮತ್ತು ಭೌತಿಕ ವಿವರ ನೀಡುವುದು)?

ಶ್ರೀ ಕೆ. ವೆಂಕಟೇಶ್ (ರಾಜ್ಯ ಕಾಡಾ ಸಚಿವರು) :—

ಅ) ಹೌದು.